ಸಿನಿಮಾ ಮೂಲಕ ನಾಯಕಿಯಾಗಿ ಚಂದನವನಕ್ಕೆ ಪರಿಚಿತಗೊಂಡರು. ಆದರೆ ಆ ಅವಧಿಯಲ್ಲಿ ಕೋವಿಡ್ ಕಾರಣವಾಗಿ ಚಿತ್ರರಂಗವೂ ಕೆಲ ಕಾಲ ಸ್ತಬ್ಧವಾಗಿದ್ದರಿಂದ, ಶಿಕ್ಷಣದತ್ತ ಆದ್ಯತೆ ನೀಡಲು ನಿರ್ಧರಿಸಿದರು.

“ನನಗಾಗ 18 ವರ್ಷ. ಮೊದಲು ಶಿಕ್ಷಣ ಪೂರೈಸಿ, ಆನಂತರ ಸಿನಿಮಾದಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಬೇಕು ಎಂದು ನಿರ್ಧರಿಸಿದೆ. ಆ ಸಮಯದಲ್ಲೂ ಕೆಲವು ಸಿನಿಮಾ ಅವಕಾಶಗಳು ಬಂದವು. ಆದರೆ ನನಗೆ ಯಾವುದೂ ಇಷ್ಟವಾಗಲಿಲ್ಲ. ‘ಬೆಂಕಿ’ ಸಿನಿಮಾ ನಂತರ, ನನ್ನನ್ನು ನಾನು ಉತ್ತಮ ರೀತಿಯಲ್ಲಿ ಪ್ರೆಸೆಂಟ್ ಮಾಡಿಕೊಳ್ಳುವ ಅವಕಾಶಕ್ಕಾಗಿ ಕಾಯುತ್ತಿದ್ದೆ. ಈಚೆಗೆ ಓದನ್ನೂ ಮುಗಿಸಿದೆ. ‘ಕರಾವಳಿ’ ಎಂಬ ಉತ್ತಮ ಪ್ರಾಜೆಕ್ಟ್ ಕೂಡ ನನಗೆ ಸಿಕ್ಕಿದೆ” ಎಂದು ಖುಷಿಯಿಂದ ಹೇಳಿಕೊಂಡರು ಅವರು.

‘ಕರಾವಳಿ’ ಸಿನಿಮಾ, ನಟ ಪ್ರಜ್ವಲ್ ದೇವರಾಜ್ 40ನೇ ಸಿನಿಮಾ ಆಗಿದ್ದು, ಅದರಲ್ಲಿ ‘ದಕ್ಷಿಣ’ ಎಂಬ ಪಾತ್ರದಲ್ಲಿ ಪಶುವೈದ್ಯೆಯಾಗಿ ಸಂಪದ ನಟಿಸುತ್ತಿದ್ದಾರೆ. ಅವರಿಗೆ ನಾಯಕಿಯಾಗಿ ಇದು ಎರಡನೇ ಸಿನಿಮಾ. ಜೊತೆಗೆ, ತಮ್ಮನ್ನು ತಾವು ನಿರೂಪಿಸಿಕೊಳ್ಳಲು ಇದು ಉತ್ತಮವಾದ, ಹಾಗೇ ಹೊಸದಾದ ಅವಕಾಶ ಎಂಬುದು ಅವರ ಭಾವನೆ.

“‘ಕರಾವಳಿ’ ನನ್ನನ್ನು ಸೆಳೆದ ಪ್ರಾಜೆಕ್ಟ್. ನನ್ನ ಪಾಲಿಗೆ ವಿಶೇಷ ಸಿನಿಮಾ ಕೂಡ ಹೌದು. ಇಂಥ ಭಿನ್ನ ಕಥಾಹಂದರದ ಸಿನಿಮಾದಲ್ಲಿ ನಟಿಸುವುದು ಸವಾಲಿನ ವಿಷಯ ಕೂಡ. ಸಿನಿಮಾ ಮೇಲೆ ನಿರೀಕ್ಷೆ ಹೆಚ್ಚಿದೆ. ನನ್ನ ಮೇಲೂ ಜವಾಬ್ದಾರಿ ಹೆಚ್ಚಿದೆ. ಈ ಸಿನಿಮಾದಲ್ಲಿ ನನಗೆ ಸ್ಕ್ರೀನ್ ಸ್ಪೇಸ್ ಚೆನ್ನಾಗಿದೆ. ಹೀಗಾಗಿ ಸಾಕಷ್ಟು ತಯಾರಿಯನ್ನೂ ಮಾಡಿಕೊಂಡಿದ್ದೇನೆ. ಈ ಪಾತ್ರವನ್ನು ಸಮರ್ಥವಾಗಿ ನಿಭಾಯಿಸುತ್ತೇನೆಂಬ ಭರವಸೆಯಿದೆ” ಎಂದು ತಮ್ಮ ಪಾತ್ರದ ಕುರಿತು ವಿವರಣೆ ನೀಡಿದರು.

ಎಲ್ಲ ರೀತಿಯ ಪಾತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಬಯಕೆ ಇರುವ ಸಂಪದಗೆ ಕಾಮಿಡಿ ಪಾತ್ರಗಳಲ್ಲಿ ಕಾಣಿಸಿಕೊಳ್ಳಲು ಇಷ್ಟ. ಜೊತೆಗೆ, ಈ ಸಿನಿಮಾ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ, ಉತ್ತಮ ಕಲಾವಿದೆ ಎಂಬ ಹೆಸರು ಗಳಿಸುವ ನಿರೀಕ್ಷೆ.

# ತಬೂಬಿಯಾ ಪ್ರೀತಿಯಲ್ಲಿ ನಿಧಿ ಸುಬ್ಬಯ್ಯ



ಬೆಂಗಳೂರು ಈಗ ಗುಲಾಬಿ ರಂಗಿನ ಚೆಲುವಿನೊಂದಿಗೆ ನಳನಳಿಸುತ್ತಿದೆ. ಕೆಲವೆಡೆಯಂತೂ ರಸ್ತೆಗಳು ಹೂ ಹಾಸುಗಳಾಗಿವೆ.

ಸ್ವಲ್ಪ ಎತ್ತರದಿಂದ ನಿಂತು ನೋಡಿದರೆ, ರಸ್ತೆಯ ಎರಡೂ ಬದಿಯಲ್ಲಿ ಅರಳಿನಿಂತ ಗೊಂಚಲು ಗೊಂಚಲು ತಬೂಬಿಯಾ ಹೂಗಳು ಮಾಯಾಲೋಕವನ್ನೇ ಸೃಷ್ಟಿಸಿದಂತೆ ಕಾಣುತ್ತಿದೆ. ‘ಚೆರ್ರಿ ಹೂ’ ಬಿರಿಯುವ ಈ ಸಮಯ ಬೆಂಗಳೂರಿನ ಚೆಲುವಿಗೆ ಮತ್ತೂ ಕಳೆ ಬಂದಂತೆ.

ಚೆರ್ರಿ ಹೂಗಳ ಈ ಚೆಲುವನ್ನು ಆಸ್ವಾದಿಸುವವರಲ್ಲಿ ನಟಿ ನಿಧಿ ಸುಬ್ಬಯ್ಯ ಕೂಡ ಒಬ್ಬರು. ಅವರು ಕೂಡ ತಬೂಬಿಯಾ ಮೋಹಕ್ಕೆ ಒಳಗಾದವರು.

‘ಈ ತಬೂಬಿಯಾ ಹೂಗಳು ಬೋಳು ಮರದ ತುಂಬಾ ಗೊಂಚಲು ಗೊಂಚಲು ಅರಳಿ ನಿಂತಾಗ, ನೋಡಲು ಕಣ್ಣೆರಡು ಸಾಲದು. ಈ ಸಮಯದಲ್ಲಿ ಬೆಂಗಳೂರು ಎಷ್ಟು ಸುಂದರ ಎನಿಸುತ್ತದೆ. ಜಪಾನಿನ ಭಾಗವೊಂದು ಇಲ್ಲಿದೆಯೇನೋ ಎನ್ನಿಸುತ್ತದೆ. ಜೊತೆಗೆ ಇಲ್ಲಿನ ಬದುಕೂ ಸುಂದರ ಎಂಬ ಭಾವ ತುಂಬುತ್ತದೆ’ ಎಂದು ಹೊಗಳಿಕೆಯ ಮಾತುಗಳನ್ನಾಡಿದ್ದಾರೆ.

ಹಾಗೇ ಜಪಾನ್‌ನಲ್ಲಿಯೂ ಈ ಹೂಗಳ ‘ಚೆರ್ರಿ ಬ್ಲಾಸಂ’ ಹೂವಿನ ಉತ್ಸವ ನೋಡುವುದು ತಮ್ಮ ಬಕೆಟ್ ಲಿಸ್ಟ್‌ನಲ್ಲಿ ಇರುವುದಾಗಿ ಹೇಳಿದ್ದಾರೆ.

# ಮಾರ್ಚ್ 15ಕ್ಕೆ ಬರಲಿದೆ ‘ಫೋಟೋ’




ಕೊರೊನಾ ಲಾಕ್‌ಡೌನ್ ಸಮಯದಲ್ಲಿ ಬಡವರು ಅನುಭವಿಸಿದ ಕಷ್ಟಕೋಟಲೆಗಳನ್ನಿಟ್ಟುಕೊಂಡು ರೂಪಿಸಿರುವ ‘ಫೋಟೋ’ ಸಿನಿಮಾ ಮಾರ್ಚ್ 15ರಂದು ತೆರೆಕಾಣಲು ಸಜ್ಜಾಗಿದೆ. ಈ ಸಿನಿಮಾಗೆ ಹಲವರ ಬೆಂಬಲವೂ ವ್ಯಕ್ತವಾಗಿದೆ.

23ರ ಪ್ರಾಯದ ಉತ್ಸವ್ ಗೋನವಾರ ಅವರ ಕಲ್ಪನೆಗೆ ನಿಲುಕಿದ ಕಥೆಯನ್ನು ಪರಿಣಾಮಕಾರಿಯಾಗಿ ಪುನರ್ ಸೃಷ್ಟಿಸಿದ್ದಾರೆ ಎಂದು ನಟ ಪ್ರಕಾಶ್ ರಾಜ್ ಕೂಡ ಬೆನ್ನು ತಟ್ಟಿದ್ದಾರೆ.

ಈ ಬಗ್ಗೆ ಉತ್ಸವ್ ಕೂಡ ಮಾತು ಹಂಚಿಕೊಂಡಿದ್ದಾರೆ. ‘ಮಹಿಳೆಯೊಬ್ಬರ ಸಾವಿನ ಪ್ರಸಂಗ ಇಟ್ಟುಕೊಂಡು ಡಾಕ್ಯುಮೆಂಟರಿ ಮಾಡಿದ್ದೆ. ಪ್ರಕಾಶ್ ರಾಜ್ ಅವರ ಪ್ರೋತ್ಸಾಹದಿಂದ ಅದೀಗ ಸಿನಿಮಾ ಆಗಿದೆ. ಬಾಲಕ ವೀರೇಶ್ ಈ ಚಿತ್ರದ ಮುಖ್ಯ ಪಾತ್ರಧಾರಿಯಾಗಿದ್ದು, ಸಹಜ ನಟನೆಯಿಂದ ಗಮನಸೆಳೆದಿದ್ದಾನೆ’ ಎಂದಿದ್ದಾರೆ.

‘ಈ ಸಿನಿಮಾ ಕಥಾವಸ್ತು ಗಟ್ಟಿಯಾಗಿದೆ. ಹೃದಯ ತಟ್ಟುತ್ತದೆ. ಹೆಚ್ಚೆಚ್ಚು ಜನರಿಗೆ ಈ ಸಿನಿಮಾ ತಲುಪಬೇಕು. ಆ ಪ್ರಯತ್ನ ನಡೆಯುತ್ತದೆ’ ಎಂದು ಭರವಸೆ ನೀಡಿದ್ದಾರೆ ಪ್ರಕಾಶ್ ರಾಜ್.

